It is the highest seat of the State.

ಶ್ರೀ ಸಿದ್ದರಾಮಯ್ಯ : ನನಗೇನಿಲ್ಲ, ರಾಜ್ಯಪಾಲರಿಗೆ ಈ ರೀತಿ ಮಾಡಬೇಕೆಂದಿದ್ದರೆ, ಬಿಟ್ಟುಬಿಡಿ. We register our protest and walk out ಅಷ್ಟೇ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ರಾಜ್ಯಪಾಲರಿಗೆ ಅಪಮಾನ ಮಾಡುತ್ತಿಲ್ಲ, ***

(ಗೊಂದಲ)

ಶ್ರೀ ಸಿದ್ದರಾಮಯ್ಯ : This is too much.

ಅಧ್ಯಕ್ಷರು : No, ಮತ್ತೆ ಏಕೆ ಹೆಸರನ್ನು ಹೇಳುತ್ತೀರಿ ? ಯಾವುದನ್ನು ದಾಖಲೆಗೆ ತೆಗೆದುಕೊಳ್ಳಬೇಡಿ. ಈಗ ಸದನವನ್ನು ಮತ್ತೆ 3.30ಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಪುನಃ ಸೇರುವಂತೆ 2 ಗಂಟೆ 18 ನಿಮಿಷಕ್ಕೆ ಮುಂದೂಡಲಾಯಿತು)

(ಸದನವು ಮಧ್ಯಾಹ್ನ 3 ಗಂಟೆ 40 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ಉಪಾಧ್ಯಕ್ಷರಾದ ಶ್ರೀ ಎನ್. ಯೋಗೀಶ್ ಭಟ್‌ರವರು ಉಪಸ್ಥಿತರಿದ್ದರು.)

3. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಕಳೆದ ಮೂರು ವರ್ಷಗಳಲ್ಲಿ ಖರೀದಿಸಿದ ವಿದ್ಯುತ್

31 (209) ಶ್ರಿ ಗೂಳಿಹಟ್ಟಿ ಡಿ. ಶೇಖರ (ಹೊಸದುರ್ಗ) :- ಇಂಧನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಕಳೆದ ಮೂರು ವರ್ಷಗಳಲ್ಲಿ ವಿದ್ಯುತ್ ಉತ್ಪಾದಿಸಿದ ವಿದ್ಯುತ್ ಎಷ್ಟು ; ಪೂರ್ಣ ವಾರ್ಷಿಕ ವಿವರ ಒದಗಿಸುವುದು ;

ಆ) ಬಳಕೆಯಾದ ವಿದ್ಯುತ್ ಎಷ್ಟು ; ಇದರಲ್ಲಿ ಕೈಗಾರಿಕೆಗಳಿಗೆ, ಸಾರ್ವಜನಿಕರಿಗೆ ಮತ್ತು ರೈತರಿಗೆ ಒದಗಿಸಿರುವ ಪ್ರಮಾಣವನ್ನು ಪ್ರತ್ಯೇಕವಾಗಿ ಒದಗಿಸುವುದು ;

ಇ) ಕಳೆದ ಮೂರು ವರ್ಷಗಳಲ್ಲಿ ವಿವಿಧ ಮೂಲಗಳಿಂದ ಖರೀದಿಸಿದ ವಿದ್ಯುತ್